# All India Radio: Bangalore
# National Bulletin In Kannada
# 06.03.2026 7.35 pm

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**06.03.2026 7.35 pm**

**<>><><*><><<>**

ಮುಖ್ಯಾಂಶಗಳು

೧. ಜಾಗತಿಕ ಅನಿಶ್ಚಿತತೆ ಎದುರಿಸಲು ಸ್ವಾವಲಂಬನೆಯೇ ದೇಶಕ್ಕೆ ಏಕೈಕ ಮಾರ್ಗ - ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಭಿಮತ

೨. ಯುಪಿಎಸ್‌ಸಿ ಫಲಿತಾಂಶ ಪ್ರಕಟ; ಕರ್ನಾಟಕದ ೨೨ ಮಂದಿ ಸೇರಿ ಒಟ್ಟು ೯೫೮ ಅಭ್ಯರ್ಥಿಗಳು ಆಯ್ಕೆ

೩. ಕೇಂದ್ರ ಕೈಗಾರಿಕಾ ಭದ್ರತಾ ಪಡೆ ಇಲ್ಲದೆ ಭಾರತದ ಕೈಗಾರಿಕಾ ಅಭಿವೃದ್ಧಿ ಅಸಾಧ್ಯ - ಕೇಂದ್ರ ಗೃಹ ಸಚಿವ ಅಮಿತ್ ಶಾ

೪. ಇದೇ ೨೬ ರಿಂದ ಛತ್ತೀಸ್‌ಗಢದಲ್ಲಿ ಖೇಲೋ ಇಂಡಿಯಾ ಬುಡಕಟ್ಟು ಕ್ರೀಡಾಕೂಟ ಆಯೋಜನೆ

**<>><><*><><<>**

ಜಾಗತಿಕ ಅನಿಶ್ಚಿತತೆಯ ಪ್ರಸ್ತುತತೆಯನ್ನು ಎದುರಿಸಲು ಸ್ವಾವಲಂಬನೆಯೇ ದೇಶಕ್ಕೆ ಏಕೈಕ ಮಾರ್ಗ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಇಂದು ಅಭಿಪ್ರಾಯ ಪಟ್ಟಿದ್ದಾರೆ. ಕೋಲ್ಕತ್ತಾದಲ್ಲಿ ಭಾರತದ ಕಡಲ ವೈಭವವನ್ನು ಮರಳಿ ಪಡೆಯುವುದು, ರಕ್ಷಣಾ ಮತ್ತು ಕಡಲ ಸಂವಾದ- ಸಾಗರ್ ಸಂಕಲ್ಪವನ್ನು ಉದ್ಘಾಟಿಸಿ ಅವರು ಇಂದು ಮಾತನಾಡಿದರು. ಪ್ರಸ್ತುತ ಜಾಗತಿಕ ಪರಿಸ್ಥಿತಿಯು, ಪೂರೈಕೆ ಸರಪಳಿಗಳ ಮರುಜೋಡಣೆ, ಹೊಸ ಸಮೀಕರಣಗಳ ರಚನೆ ಮತ್ತು ಕಡಲ ಚಟುವಟಿಕೆಗಳಲ್ಲಿ ನಿರಂತರ ಏರಿಕೆಗೆ ಕಾರಣವಾಗಿದೆ ಎಂದರು. ಪ್ರತಿಯೊಂದು ಕ್ಷೇತ್ರದಲ್ಲೂ ದೇಶವು ಸ್ವಾವಲಂಬನೆ ಸಾಧಿಸುವೆಡೆಗಿನ ಸರ್ಕಾರದ ಸಂಕಲ್ಪವನ್ನು ಸಚಿವರು ಪುನರುಚ್ಚರಿಸಿದರು. ೨೦೨೪-೨೫ರಲ್ಲಿ ದೇಶೀಯ ರಕ್ಷಣಾ ಉತ್ಪಾದನೆಯು ಒಂದು ಲಕ್ಷ ೫೦ ಸಾವಿರ ಕೋಟಿ ರೂಪಾಯಿಗಳ ದಾಖಲೆಯನ್ನು ಮೀರಿರುವುದರಿಂದ ಸರ್ಕಾರದ ಪ್ರಯತ್ನಗಳು ಸಕಾರಾತ್ಮಕ ಫಲಿತಾಂಶಗಳನ್ನು ನೀಡುತ್ತಿವೆ. ರಕ್ಷಣಾ ರಫ್ತು ಕೂಡ ಸಾರ್ವಕಾಲಿಕ ಗರಿಷ್ಠ ೨೪ ಸಾವಿರ ಕೋಟಿ ರೂಪಾಯಿಗಳನ್ನು ಮುಟ್ಟಿದೆ ಎಂದು ಸಚಿವ ರಾಜನಾಥ್ ಸಿಂಗ್ ತಿಳಿಸಿದರು.

**<>><><*><><<>**

ಕೇಂದ್ರ ಲೋಕಸೇವಾ ಆಯೋಗ, ೨೦೨೫ರ ನಾಗರಿಕ ಸೇವಾ ಪರೀಕ್ಷೆಯ ಅಂತಿಮ ಫಲಿತಾಂಶವನ್ನು ಇಂದು ಘೋಷಿಸಿದೆ.೨೦೨೫ ರ ಮೇ ೨೫ ರಂದು ನಡೆದ ನಾಗರಿಕ ಸೇವೆಗಳ ಪೂರ್ವಭಾವಿ ಪರೀಕ್ಷೆಗೆ ೯ ಲಕ್ಷ ಮೂವತ್ತು ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು ಎಂದು ಕೇಂದ್ರ ಲೋಕಸೇವಾ ಆಯೋಗ ತಿಳಿಸಿದೆ. ಇಂದು ಬಿಡುಗಡೆಯಾದ ಅಂತಿಮ ಫಲಿತಾಂಶದಲ್ಲಿ, ೬೫೯ ಪುರುಷರು ಮತ್ತು ೨೯೯ ಮಹಿಳೆಯರು ಸೇರಿದಂತೆ ಒಟ್ಟು ೯೫೮ ಅಭ್ಯರ್ಥಿಗಳನ್ನು ವಿವಿಧ ಸೇವೆಗಳಿಗೆ ನೇಮಕಾತಿಗಾಗಿ ಆಯೋಗ ಶಿಫಾರಸು ಮಾಡಿದೆ. ಅನುಜ್ ಅಗ್ನಿಹೋತ್ರಿ ಮೊದಲ ಸ್ಥಾನ ಪಡೆದರೆ, ರಾಜೇಶ್ವರಿ ಸುವೆ ಮತ್ತು ಆಕಾಶ್ ಧುಲ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದಿದ್ದಾರೆ ಎಂದು ಕೇಂದ್ರ

ಲೋಕಸೇವಾ ಆಯೋಗ ತಿಳಿಸಿದೆ. ಕರ್ನಾಟಕದ ೨೨ ಅಭ್ಯರ್ಥಿಗಳು ಅಂತಿಮ ಪಟ್ಟಿಯಲ್ಲಿ ಆಯ್ಕೆಯಾಗಿದ್ದು, ರಾಷ್ಟ್ರಮಟ್ಟದಲ್ಲಿ ೫೩ನೇ ರ್‍ಯಾಂಕ್ ಪಡೆದ ಕಿರಣ್ ಕಮತೆ ರಾಜ್ಯದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

<>><><*><><<>

ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ೨೦೨೬-೨೭ ನೇ ಸಾಲಿನಲ್ಲಿ ನಾಲ್ಕು ಲಕ್ಷದ ನಲವತ್ತೆಂಟು ಸಾವಿರದ ನಾಲ್ಕು ಕೋಟಿ ರೂಪಾಯಿ ಬಜೆಟ್ ಮಂಡಿಸಿದ್ದಾರೆ. ೧೭ನೇ ಬಜೆಟ್ ಮಂಡನೆ ಮಾಡುವ ಮೂಲಕ ರಾಜ್ಯದಲ್ಲಿ ಅತಿ ಹೆಚ್ಚು ಬಜೆಟ್ ಮಂಡಿಸಿದ ಕೀರ್ತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾತ್ರರಾಗಿದ್ದಾರೆ. ಸಂವಿಧಾನ ಪೀಠಿಕೆ ಬೋಧನೆ ಬಳಿಕ, ಬಜೆಟ್ ಮಂಡನೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ೨೦೭ ಪುಟಗಳ ಸುದೀರ್ಘ ಬಜೆಟ್ ಭಾಷಣ ಓದಿದರು. ರಾಜ್ಯ ತೆರಿಗೆಯಿಂದ ೨ ಲಕ್ಷ ೨೦ ಸಾವಿರ ಕೋಟಿ ರೂಪಾಯಿ ಆದಾಯ ಬಂದರೆ, ಕೇಂದ್ರ ತೆರಿಗೆ ಪಾಲಿನಿಂದ ೬೩ ಸಾವಿರದ ೫೦ ಕೋಟಿ ರೂಪಾಯಿ, ಕೇಂದ್ರ ಸರ್ಕಾರದ ಅನುದಾನಗಳಿಂದ ೧೬ ಸಾವಿರ ಕೋಟಿ ರೂಪಾಯಿ, ತೆರಿಗೆಯೇತರ ರಾಜಸ್ವದಿಂದ ೧೬ ಸಾವಿರ ಕೋಟಿ ರೂಪಾಯಿ ಆದಾಯ ಬರಲಿದೆ ಎಂದು ಬಜೆಟ್ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ೧ ಲಕ್ಷದ ೨೨ ಸಾವಿರದ ೩೪೦ ಕೋಟಿ ರೂಪಾಯಿ ಬಹಿರಂಗ ಮಾರುಕಟ್ಟೆ ಸಾಲ ಪಡೆಯುವುದರ ಜೊತೆಗೆ ಕೇಂದ್ರ ಸರ್ಕಾರದಿಂದಲೂ ೬ ಸಾವಿರದ ೮೧೦ ಕೋಟಿ ರೂಪಾಯಿ ಸಾಲ ಸಹಿತ ಒಟ್ಟು ೧ ಲಕ್ಷದ ೩೨ ಸಾವಿರ ಕೋಟಿ ರೂಪಾಯಿ ಸಾಲ ಪಡೆಯುವುದಾಗಿ ತಮ್ಮ ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ.

<>><><*><><<>

ಕೇಂದ್ರ ಕೈಗಾರಿಕಾ ಭದ್ರತಾ ಪಡೆ- ಸಿಐಎಸ್‌ಎಫ್ ಇಲ್ಲದೆ ಭಾರತದ ಕೈಗಾರಿಕಾ ಅಭಿವೃದ್ಧಿ ಅಸಾಧ್ಯ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಕಟಕ್‌ನ ಮುಂಡುಲಿಯಲ್ಲಿಂದು ನಡೆದ ಸಿಐಎಸ್‌ಎಫ್‌ನ ೫೭ನೇ ಸಂಸ್ಥಾಪನಾ ದಿನಾಚರಣೆಯನ್ನುದ್ದೇಶಿಸಿ ಮಾತನಾಡಿದ ಅವರು, ದೇಶಾದ್ಯಂತದ ಪ್ರಮುಖ ಕೈಗಾರಿಕಾ ಸ್ಥಾಪನೆಗಳಲ್ಲಿ ಭದ್ರತೆಯನ್ನು ಖಾತರಿಪಡಿಸುವಲ್ಲಿ ಈ ಪಡೆಯು ನಿರ್ಣಾಯಕ ಪಾತ್ರ ವಹಿಸುತ್ತಿದೆ ಎಂದು ಹೇಳಿದರು. ಪ್ರಮುಖ ಸಮುದ್ರ ಸೌಲಭ್ಯಗಳಲ್ಲಿ ಸುರಕ್ಷತೆಯನ್ನು ಮತ್ತಷ್ಟು ಬಲಪಡಿಸಲು ಬಂದರು ಭದ್ರತೆಯನ್ನು ಶೀಘ್ರದಲ್ಲೇ ಸಿಐಎಸ್‌ಎಫ್‌ಗೆ ವಹಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು. ಮಾವೋವಾದದ ವಿರುದ್ಧದ ಹೋರಾಟವನ್ನು ಉಲ್ಲೇಖಿಸಿ, ಮಾರ್ಚ್ ೨೦೨೬ ರ ವೇಳೆಗೆ ಭಾರತ ನಕ್ಸಲಿಸಂನಿಂದ ಮುಕ್ತವಾಗಲಿದೆ ಎಂದು ಗೃಹ ಸಚಿವರು ವಿಶ್ವಾಸ ವ್ಯಕ್ತಪಡಿಸಿದರು. ಈ ಕಾರ್ಯಾಚರಣೆಗೆ ಸಿಐಎಸ್‌ಎಫ್ ಮಹತ್ವದ ಕೊಡುಗೆ ನೀಡಿದೆ ಎಂದು ಸಚಿವ ಅಮಿತ್ ಶಾ ತಿಳಿಸಿದರು.

<>><><*><><<>

ದೇಶದ ರಫ್ತುದಾರರನ್ನು ಬೆಂಬಲಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ, ಪ್ರತಿಯೊಂದು ನೀತಿ ಸಾಧನ ಮತ್ತು ರಫ್ತು ಉತ್ತೇಜನ ಮಿಷನ್ ಅನ್ನು ಬಳಸುತ್ತದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ಅಮೆರಿಕ-ಇಸ್ರೇಲ್ ಮತ್ತು ಇರಾನ್ ಸಂಘರ್ಷದ ಮಧ್ಯೆ ವ್ಯಾಪಾರ ಅಡೆತಡೆಗಳ ಕುರಿತು ನವದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಸಮಸ್ಯೆಗಳನ್ನು ಪರಿಶೀಲಿಸಲು ಸರ್ಕಾರ ಅಂತರ-ಸಚಿವಾಲಯ ಗುಂಪನ್ನು ಸ್ಥಾಪಿಸಿದೆ ಎಂದು ತಿಳಿಸಿದರು. ಸರಕು ಮತ್ತು ಸೇವೆಗಳಲ್ಲಿ ವಿದೇಶಿ ಖರೀದಿದಾರರಿಗೆ ದೇಶದ ಕೈಗಾರಿಕೆಗಳು ಮಾಡಿರುವ ಎಲ್ಲಾ ಬದ್ಧತೆಗಳನ್ನು ಭಾರತ, ಪೂರೈಸುವುದನ್ನು ಮುಂದುವರಿಸುತ್ತದೆ ಎಂದು ಅವರು ಹೇಳಿದರು.

<>><><*><><<>

ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಖಾತೆ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್ ನವದೆಹಲಿಯಲ್ಲಿಂದು ಪರಿಸರ ಸಹಕಾರದ ಕುರಿತು ನಿಯೋಗ ಮಟ್ಟದ ಮಾತುಕತೆ ಮತ್ತು ನವೀಕರಿಸಿದ ತಿಳುವಳಿಕೆ ಒಪ್ಪಂದ ವಿನಿಮಯದಲ್ಲಿ ಭಾಗವಹಿಸಿದರು. ಈ ಕುರಿತು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ೨೦೨೦ ರ ಒಪ್ಪಂದದ ನವೀಕರಣವು ಮಾಲಿನ್ಯ ನಿಯಂತ್ರಣ, ಸುಸ್ಥಿರ ತ್ಯಾಜ್ಯ ನಿರ್ವಹಣೆ ಮತ್ತು ಹವಾಮಾನ ಕ್ರಮದಲ್ಲಿ ಜಂಟಿ ಪ್ರಯತ್ನಗಳನ್ನು ಮುಂದುವರಿಸುವ ಭಾರತದ ಬದ್ಧತೆಯನ್ನು ಪುನರುಚ್ಚರಿಸುತ್ತದೆ ಎಂದು ತಿಳಿಸಿದ್ದಾರೆ. ಈ ಒಪ್ಪಂದವು, ಬಲವರ್ಧಿತ ಜ್ಞಾನ ಮತ್ತು ತಂತ್ರಜ್ಞಾನ ಪಾಲುದಾರಿಕೆಯ ಮೂಲಕ ಅರಣ್ಯಗಳು ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯನ್ನು ಸಕ್ರಿಯಗೊಳಿಸುತ್ತದೆ ಎಂದು ಸಚಿವ ಕೀರ್ತಿ ವರ್ಧನ್ ಸಿಂಗ್ ತಿಳಿಸಿದರು.

**<>><><*><><<>**

ಕೈಗಾರಿಕೋದ್ಯಮಿ ಅನಿಲ್ ಅಂಬಾನಿ ಮತ್ತು ರಿಲಯನ್ಸ್ ಪವರ್‌ನ ಅಧೀನ ಕಂಪನಿಗಳಿಗೆ ಸಂಬಂಧಿಸಿದ ಹಣಕಾಸಿನ ಅಕ್ರಮಗಳ ತನಿಖೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ- ಇ.ಡಿ ಇಂದು ಮುಂಬೈ ಮತ್ತು ಹೈದರಾಬಾದ್‌ನ ಹಲವು ಸ್ಥಳಗಳಲ್ಲಿ ದಾಳಿ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಧಿಕಾರಿಗಳ ಪ್ರಕಾರ, ಸುಮಾರು ೧೫ ಇ.ಡಿ ತಂಡಗಳು ಇಂದು ಬೆಳಗ್ಗೆ ಮುಂಬೈ ಸೇರಿದಂತೆ ೧೦ ರಿಂದ ೧೨ ಸ್ಥಳಗಳಲ್ಲಿ ದಾಳಿ ನಡೆಸಿವೆ. ರಿಲಯನ್ಸ್ ಪವರ್ ಮತ್ತು ಅಂಬಾನಿಗೆ ಸಂಬಂಧಿಸಿದ ಇತರ ಸಂಸ್ಥೆಗಳಿಗೆ ಸಂಬಂಧಿಸಿದ ವ್ಯಕ್ತಿಗಳು ಮತ್ತು ಸಂಸ್ಥೆಗಳ ವಿರುದ್ಧ ಶೋಧ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ. ಇದಕ್ಕೂ ಮೊದಲು, ಕೇಂದ್ರ ತನಿಖಾ ದಳ-ಸಿಬಿಐ ರಿಲಯನ್ಸ್ ಕಮ್ಯುನಿಕೇಷನ್ಸ್ ವಿರುದ್ಧ ೨ ಸಾವಿರದ ೨೦೦ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ಬ್ಯಾಂಕಿಂಗ್ ವಂಚನೆ ಪ್ರಕರಣವನ್ನು ದಾಖಲಿಸಿತ್ತು.

**<>><><*><><<>**

ಖೇಲೋ ಇಂಡಿಯಾ ಬುಡಕಟ್ಟು ಕ್ರೀಡಾಕೂಟ ಇದೇ ೨೬ ರಿಂದ ಏಪ್ರಿಲ್ ೬ ರವರೆಗೆ ಛತ್ತೀಸ್‌ಗಢದಲ್ಲಿ ನಡೆಯಲಿದೆ ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಡಾ.ಮನ್ಸುಖ್ ಮಾಂಡವಿಯಾ ಹೇಳಿದ್ದಾರೆ. ಬುಡಕಟ್ಟು ಕ್ರೀಡಾಕೂಟದ ಉದ್ಘಾಟನಾ ಆವೃತ್ತಿಯು ರಾಯ್‌ಪುರ, ಜಗದಲ್‌ಪುರ ಮತ್ತು ಸರ್ಗುಜಾ ಸೇರಿದಂತೆ ರಾಜ್ಯದ ಮೂರು ನಗರಗಳಲ್ಲಿ ನಡೆಯಲಿದ್ದು, ಅಥ್ಲೆಟಿಕ್ಸ್, ಫುಟ್‌ಬಾಲ್, ಹಾಕಿ, ವೇಟ್‌ಲಿಫ್ಟಿಂಗ್, ಬಿಲ್ಲುಗಾರಿಕೆ, ಈಜು ಮತ್ತು ಕುಸ್ತಿ ಸೇರಿದಂತೆ ಏಳು ಕ್ರೀಡೆಗಳನ್ನು ಒಳಗೊಂಡಿರುತ್ತದೆ. ಕ್ರೀಡೆಗಳನ್ನು ಆಡಲು ಬಯಸುವ ಪ್ರತಿಯೊಬ್ಬ ಯುವಕನಿಗೆ ಅವಕಾಶ ಮತ್ತು ವ್ಯಾಪ್ತಿಯನ್ನು ವಿಸ್ತರಿಸುವ ಸಲುವಾಗಿ ಈ ಕ್ರೀಡಾಕೂಟ ಆಯೋಜನೆಗೊಳ್ಳಲಿದೆ ಎಂದು ಡಾ.ಮಾಂಡವಿಯಾ ಹೇಳಿದರು. ಬುಡಕಟ್ಟು ಪ್ರದೇಶಗಳಲ್ಲಿ ಹೊರಹೊಮ್ಮುತ್ತಿರುವ ಪ್ರತಿಭೆಗಳ ನೆಲೆಯನ್ನು ಗುರುತಿಸುವಲ್ಲಿ ಮತ್ತು ವಿಕಸಿತ ಭಾರತದ ದೃಷ್ಟಿಕೋನವನ್ನು ಸಾಧಿಸುವಲ್ಲಿ ಕ್ರೀಡೆಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಸಚಿವರು ತಿಳಿಸಿದರು. ಸಾಮೂಹಿಕ ಭಾಗವಹಿಸುವಿಕೆ ಮತ್ತು ಕ್ರೀಡಾ ಶ್ರೇಷ್ಠತೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿರುವ ಸರ್ಕಾರದಿಂದ ಖೇಲೋ ಇಂಡಿಯಾ ಬುಡಕಟ್ಟು ಕ್ರೀಡಾಕೂಟ ಖೇಲೋ ಇಂಡಿಯಾ ಯೋಜನೆಯ ಭಾಗವಾಗಿದೆ.

**<>><><*><><<>**

ಈ ವರ್ಷದ ಫೆಬ್ರವರಿಯಲ್ಲಿ ಭಾರತೀಯ ರೈಲ್ವೆ ೧೩೭ ದಶಲಕ್ಷ ಟನ್‌ಗಳಿಗಿಂತ ಹೆಚ್ಚು ಸರಕು ಸಾಗಣೆ ಮಾಡಿದ್ದು, ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇಕಡಾ. ೩.೯೬ ರಷ್ಟು ಗಮನಾರ್ಹ ಹೆಚ್ಚಳವನ್ನು ದಾಖಲಿಸಿದೆ. ಸರಕು ಸಾಗಣೆಯಲ್ಲಿನ ಸ್ಥಿರ ಬೆಳವಣಿಗೆಯು, ವಿವಿಧ ವಲಯಗಳಲ್ಲಿ ರೈಲು ಆಧಾರಿತ ಲಾಜಿಸ್ಟಿಕ್ಸ್‌ಗೆ ನಿರಂತರ ಬೇಡಿಕೆಯನ್ನು ಪ್ರತಿಬಿಂಬಿಸುತ್ತದೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ.  ಅಗತ್ಯ ವಸ್ತುಗಳ ಸಾಗಣೆಯನ್ನು ಖಚಿತಪಡಿಸಿಕೊಳ್ಳುವ ಮೂಲಕ ದೇಶದ

ಆರ್ಥಿಕ ಚಟುವಟಿಕೆಯನ್ನು ಬೆಂಬಲಿಸುವಲ್ಲಿ ಭಾರತೀಯ ರೈಲ್ವೆಯ ನಿರ್ಣಾಯಕ ಪಾತ್ರವನ್ನು ಶ್ಲಾಘಿಸುತ್ತಾ, ಈ ತಿಂಗಳಲ್ಲಿ ಸರಕು ಸಾಗಣೆ ಆದಾಯವು ೧೪ ಸಾವಿರದ ೫೦೦ ಕೋಟಿಗೂ ಹೆಚ್ಚಿದೆ ಎಂದು ಸಚಿವಾಲಯ ಹೇಳಿದೆ. ಸಾಮರ್ಥ್ಯ ವರ್ಧನೆ, ಸುಧಾರಿತ ಟರ್ಮಿನಲ್ ಮೂಲಸೌಕರ್ಯ, ಮೀಸಲಾದ ಸರಕು ಕಾರಿಡಾರ್‌ಗಳು ಮತ್ತು ಡಿಜಿಟಲ್ ಸರಕು ನಿರ್ವಹಣಾ ವ್ಯವಸ್ಥೆಗಳ ಮೂಲಕ ರೈಲ್ವೆ ತನ್ನ ಸರಕು ಸಾಗಣೆಯನ್ನು ಬಲಪಡಿಸುವುದನ್ನು ಮುಂದುವರೆಸಿದೆ. ಮೂಲಸೌಕರ್ಯ ಮತ್ತು ಸರಕು ಸಾಗಣೆ ಕಾರ್ಯಾಚರಣೆಗಳಲ್ಲಿ ನಿರಂತರ ಹೂಡಿಕೆಗಳೊಂದಿಗೆ, ದೇಶದ ಲಾಜಿಸ್ಟಿಕ್ಸ್ ಜಾಲದ ಬೆನ್ನೆಲುಬಾಗಿ ಮತ್ತು ಭಾರತದ ಆರ್ಥಿಕ ಬೆಳವಣಿಗೆಗೆ ಬೆಂಬಲ ನೀಡುವ ತನ್ನ ಪಾತ್ರವನ್ನು ಹೆಚ್ಚಿಸಲು ಭಾರತೀಯ ರೈಲ್ವೆ ಬದ್ಧವಾಗಿದೆ ಎಂದು ಸಚಿವಾಲಯ ಹೇಳಿದೆ.

**<>><><*><><<>**

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ಏಳನೇ ದಿನಕ್ಕೆ ಕಾಲಿಟ್ಟಿದ್ದು, ಜಾಗತಿಕ ಕಚ್ಚಾ ತೈಲ ಬೆಲೆಗಳು ಇಂದು ಏರಿಕೆಯನ್ನು ದಾಖಲಿಸಿವೆ. ಇತ್ತೀಚಿನ ವರದಿ ಬಂದಾಗ ಬ್ರೆಂಟ್ ಕಚ್ಚಾ ತೈಲವು ಶೇಕಡಾ ೪ರಷ್ಟು, ಏರಿಕೆ ಕಂಡು ಬ್ಯಾರೆಲ್‌ಗೆ ೮೯ ಯುಎಸ್ ಡಾಲರ್, ೨೯ ಸೆಂಟ್‌ಗಳಲ್ಲಿ ಏರಿಕೆಯಾಗಿದ್ದು, ಡಬ್ಲ್ಯುಟಿಐ ಕಚ್ಚಾ ತೈಲವು ಬ್ಯಾರೆಲ್‌ಗೆ ಶೇಕಡಾ ಸುಮಾರು ೬ರಷ್ಟು ಏರಿಕೆ ಕಂಡು ೮೫ ಯುಎಸ್ ಡಾಲರ್, ೮೭ ಸೆಂಟ್‌ಗಳಲ್ಲಿ ವಹಿವಾಟು ನಡೆಸುತ್ತಿದೆ.

**<>><><*><><<>**

ದೇಶಾದ್ಯಂತ ರಾಷ್ಟ್ರೀಯ ಹೆದ್ದಾರಿಗಳು ಮತ್ತು ಎಕ್ಸ್‌ಪ್ರೆಸ್‌ವೇ ಜಾಲಗಳಾದ್ಯಂತ ಒಂದು ಸಾವಿರಕ್ಕೂ ಹೆಚ್ಚು ಟೋಲ್ ಪ್ಲಾಜಾಗಳಲ್ಲಿ ಟೋಲ್ ಬೂತ್‌ಗಳನ್ನು ನಿರ್ವಹಿಸಲು ಐದು ಸಾವಿರಕ್ಕೂ ಹೆಚ್ಚು ಮಹಿಳಾ ಸಿಬ್ಬಂದಿಯನ್ನು, ಹಗಲು ಪಾಳಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿಯೋಜಿಸಲಾಗಿದೆ ಎಂದು ಸರ್ಕಾರ ಇಂದು ತಿಳಿಸಿದೆ. ಟೋಲ್ ಕಾರ್ಯಾಚರಣೆಗಳಲ್ಲಿ ಮಹಿಳಾ ಸಬಲೀಕರಣ ಮತ್ತು ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ಗುರಿಯನ್ನು ಈ ನಿಯೋಜನೆ ಹೊಂದಿದೆ. ರಾಷ್ಟ್ರೀಯ ಹೆದ್ದಾರಿ ಪ್ರಯಾಣಿಕರಿಗೆ ದಕ್ಷ, ಸಹಾನುಭೂತಿ ಮತ್ತು ಬಳಕೆದಾರ ಸ್ನೇಹಿ ವಾತಾವರಣವನ್ನು ಬೆಳೆಸುವ ಮೂಲಕ ರಾಷ್ಟ್ರೀಯ ಹೆದ್ದಾರಿ ಬಳಕೆದಾರರ ಅನುಭವವನ್ನು ಗಮನಾರ್ಹವಾಗಿ ಸುಧಾರಿಸುವ ಗುರಿಯನ್ನು ಈ ಕ್ರಮ ಹೊಂದಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ತಿಳಿಸಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ ><><<>**